# ಸೂಕ್ತಿಪ್ರಭ

ಕಾಲದ ಒಂದು ಇಂಚೂ ಕೂಡ ಚಿನ್ನದ ಇಂಚಿಗೆ ಸಮಾನ. ಆದರೆ ಚಿನ್ನದ ಇಂಚಿನಿಂದ ಕಾಲದ ಇಂಚನ್ನು ಕೊಳ್ಳಲಾಗುವುದಿಲ್ಲ.

—ಚೀನೀಗಾದೆ

ಕ್ರಿಯಾರಹಿತ ಚಿಂತನೆ ಹಗಲುಸ್ವಪ್ನ ; ಚಿಂತನಾರಹಿತ ಕ್ರಿಯೆ ದುಃಸ್ವಪ್ನ.

—ಜಪಾನ್‌ಗಾದೆ

ಇಲ್ಲದಿರುವುದನ್ನು ಕುರಿತು ಚಿಂತೆಗೊಳಗಾಗುವುದು ಇರುವುದನ್ನು ಕಳೆದುಕೊಂಡಂತೆ.

ಹರಿತವಾದ ನಾಲಗೆ ಕೆಲವೊಮ್ಮೆ ತನ್ನ ಕತ್ತನ್ನೇ ಕತ್ತರಿಸುತ್ತದೆ.

—ಜೆಮ್ಸ್ ಸ್ಟ್ಯಾಂಸಲೆ

ಈ ಪ್ರಪಂಚದಲ್ಲಿ ಇತರರ ಮಾತಿಗೆ ಒಳಗಾಗುವುದಕ್ಕಿಂತ ಕೀಳಾದುದು ಯಾರೂ ತನ್ನ ಬಗ್ಗೆ ಮಾತನಾಡದೆ ಇರುವುದು.

—ಆಸ್ಕರ್ ವೈಲ್ಡ್

ನಮ್ಮಲ್ಲಿ ಕೆಲಸವಿಲ್ಲದೆ ಜೀವಿಸುವವರು ಅನೇಕರಿದ್ದಾರೆ. ಆದರೆ ಅದಕ್ಕಿಂತಲೂ ಹೆಚ್ಚಾಗಿ ಜೀವಿಸದೆ ಕೆಲಸ ಮಾಡುವವರಿದ್ದಾರೆ.

— ಡೀನ್ ಚಾರ್ಲ್ಸ್ ಆರ್. ಬ್ರೌನ್

**ಗಚ್ಛನ್ ಪಿಪೀಲಿಕೋ ಯಾತಿ**
**ಯೋಜನಾನಾಂ ಶತಾನಪಿ ।**
**ಅಗಚ್ಛನ್ ವೈನತೇಯೋಽಪಿ**
**ಪದಮೇಕಂ ನ ಗಚ್ಛತಿ ॥**

'ಇರುವೆಯು ಚಲಿಸುತ್ತ ನೂರು ಯೋಜನವನ್ನಾದರು ಕ್ರಮಿಸೀತು. ಆದರೆ ಗರುಡನೂ ಕೂಡ ಚಲಿಸದೆ ಒಂದು ಹೆಜ್ಜೆಯೂ ಮುಂದುವರಿಯಲಾರ.'

—ಸುಭಾಷಿತ

# ಪ್ರಾರ್ಥನೆ

**ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತೋಽ**
**ದಬ್ಧಾಸೋ ಅಪರೀತಾಸ ಉದ್ಭಿದಃ ।**
**ದೇವಾ ನೋ ಯಥಾ ಸದಮಿದ್ ವೃಧೇ ಅಸನ್ನ-**
**ಪ್ರಾಯುವೋ ರಕ್ಷಿತಾರೋ ದಿವೇ ದಿವೇ ॥**

ಶುಭ ಚಿಂತನೆಗಳು ಎಲ್ಲ ಕಡೆಗಳಿಂದಲೂ ನಮಗೆ ಬರಲಿ– ದೋಷರಹಿತವಾದ, ಅಡೆತಡೆಯಿಲ್ಲದ, ಬಂಧನಗಳನ್ನು ಕತ್ತರಿಸಲು ಸಮರ್ಥವಾದ ಆಲೋಚನೆಗಳು ಬರಲಿ. ಭಕ್ತರ ಕೈಬಿಡದ ದೇವತೆಗಳು ನಮ್ಮನ್ನು ರಕ್ಷಿಸುತ್ತ, ನಮ್ಮ ಸುಖವನ್ನು ವರ್ಧಿಸುತ್ತ ನಮ್ಮೊಂದಿಗಿರಲಿ.

(ಋಗ್ವೇದ, ೧.೮೯.೧)

**ಆ ಕೃಷ್ಣೇನ ರಜಸಾ ವರ್ತಮಾನೋ**
**ನಿವೇಶಯನ್ನಮೃತಂ ಮರ್ತ್ಯಂ ಚ ।**
**ಹಿರಣ್ಯಯೇನ ಸವಿತಾ ರಥೇನ**
**ದೇವೋ ಯಾತಿ ಭುವನಾನಿ ಪಶ್ಯನ್ ॥**

ಕತ್ತಲನ್ನು ಭೇದಿಸಿಕೊಂಡು ರಂಜಿತವಾದ ಬೆಳಕಿನಿಂದ ಕೂಡಿಕೊಂಡು ಸುತ್ತುತ್ತಿರುವ ಹಾಗೂ ಭೂತ, ಭವಿಷ್ಯತ್, ವರ್ತಮಾನಗಳನ್ನು ನೋಡಬಲ್ಲ ಸವಿತೃದೇವನು ಅವರವರ ಕರ್ಮಕ್ಕನುಗುಣವಾಗಿ ಅಮೃತವನ್ನೂ ಮರಣವನ್ನೂ ನೀಡುತ್ತಾ ಸಮಸ್ತ ಲೋಕಗಳನ್ನು ವೀಕ್ಷಿಸುತ್ತಾ ಹಿರಣ್ಯದಂತೆ ಪ್ರಕಾಶಮಾನವಾದ ರಥದಿಂದ ಬರುತ್ತಿದ್ದಾನೆ.

(ಋಗ್ವೇದ, ೧.೩೫.೩)

**ಅದ್ಯಾ ನೋ ದೇವ ಸವಿತಃ**
**ಪ್ರಜಾವತ್ಸಾವೀಸ್ಸೌಭಗಮ್**
**ಪರಾ ದುಃಶ್ವಪ್ನಿಯಗ್ಂ ಸುವ ।**
**ವಿಶ್ವಾನಿ ದೇವ ಸವಿತರ್ದುರಿತಾನಿ ಪರಾ ಸುವ**
**ಯದ್ ಭದ್ರಂ ತನ್ನ ಆ ಸುವ ॥**

ಪ್ರೇರಕನಾದ ಸವಿತೃದೇವನೇ, ವಿದ್ಯಾರ್ಥಿಗಳನ್ನು ಮಕ್ಕಳಂತೆ ನೋಡಿಕೊಳ್ಳುವ ಸೌಭಾಗ್ಯವನ್ನು ಅನುಗ್ರಹಿಸು. ಕೆಟ್ಟ ಕನಸಿನಿಂದ ಉಂಟಾದ ಅನರ್ಥವನ್ನು ದೂರಮಾಡು. ಹೇ ಸವಿತೃದೇವನೇ ನಮ್ಮ ಎಲ್ಲ ಪಾಪಗಳನ್ನೂ ಕಳೆ. ಯಾವುದು ಮಂಗಳವೋ ಅದನ್ನು ನಮಗೆ ಎಲ್ಲೆಡೆಯಿಂದಲೂ ಕರುಣಿಸು..

(ಮಹಾನಾರಾಯಣ ಉಪನಿಷತ್, ೩ನೆ ಅನುವಾಕ)